# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 229 | Pages. 2 | Date: 21-08-2026, FRIDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 229 - ಪುಟಗಳು : 2 | 21-08-2026 ಶುಕ್ರವಾರ | Ph: 8762954248 | ದರ : ₹1


# ಲಕ್ಷಾಂತರ ರೈತರಿಗೆ ಭೂ ಒಡೆತನ ಕಲ್ಪಿಸಿದ ಅರಸು

## ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಬಣ್ಣನೆ | ಜಿಲ್ಲಾದ್ಯಂತ ಅರ್ಥಪೂರ್ಣ ಜಯಂತಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಉಳುವವನೇ ಭೂಮಿಯ ಒಡೆಯ ಎಂಬ ಕ್ರಾಂತಿಕಾರಿ ಕಾಯ್ದೆಯನ್ನು ಜಾರಿಗೆ ತಂದು ಲಕ್ಷಾಂತರ ರೈತರಿಗೆ ಭೂಮಿಯ ಒಡೆತನದ ಹಕ್ಕು ನೀಡಿದವರು ಡಿ. ದೇವರಾಜ್ ಅರಸು ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಬಣ್ಣಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಹಿಂದುಳಿದ ವರ್ಗಗಳ ಕಲ್ಯಾಣ ಸಂಯುಕ್ತಾಶ್ರಯದಲ್ಲಿ ಗುರುವಾರ ಹಾಸನಾಂಬ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ ಸಾಮಾಜಿಕ ಕ್ರಾಂತಿಯ ನೇತಾರ, ಪರಿವರ್ತನೆಯ ಹರಿಕಾರ ಹಾಗೂ ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ 111ನೇ ಜನ್ಮ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ಬಡವರು ಮತ್ತು ಶೋಷಿತರ ಬಾಳಿಗೆ ಬೆಳಕಾದ ಅಂತಹ ಮಹಾನ್ ನಾಯಕನನ್ನು ಸ್ಮರಿಸುವುದು ಹೆಮ್ಮೆಯ ವಿಷಯ. ದೇವರಾಜ ಅರಸು ಕೇವಲ ನಾಯಕರಲ್ಲ, ಶೋಷಿತರ ಧ್ವನಿಯಾಗಿದ್ದರು. ಅವರ ಆದರ್ಶಗಳನ್ನು ಮತ್ತು ಸಾಮಾಜಿಕ ನ್ಯಾಯದ ಹಾದಿಯನ್ನು ಮುಂದುವರಿಸಿಕೊಂಡು ಹೋಗುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

### ಭಾರತ್ ಜೋಡೋದಲ್ಲಿ ಭಾಗವಹಿಸಿ

ಭಾರತ್ ಜೋಡೋ ಯುವ ಸಂಘದಲ್ಲಿ ಪ್ರತಿಯೊಬ್ಬರು ಆಡಳಿತದ ಹಾದಿಯಲ್ಲಿ ಮುನ್ನುಗ್ಗಬೇಕು ಹಾಗೂ ಯುವಜನತೆ ಆಧುನಿಕ ಸಮಾಜದಲ್ಲಿ ಸಬಲೀಕರಣ ಹೊಂದಬೇಕು. ಆಧುನಿಕ ಯುಗದಲ್ಲಿ ಯುವಜನತೆಯ ಕೊಡುಗೆ ಅಪಾರವಾಗಿದೆ. ಆದ್ದರಿಂದ ಸಾಮಾಜಿಕವಾಗಿ ಯುವಕರು ಸಂಘಟಿಕರಾಗಬೇಕು. ಹಕ್ಕು ಪಡೆಯಲು, ನ್ಯಾಯಕ್ಕಾಗಿ ಹೋರಾಟ ಮಾಡಲು ಸಿದ್ದರಾಗಬೇಕು. 16 ವರ್ಷ ಮೇಲ್ಪಟ್ಟ ಹಾಗೂ 35 ವರ್ಷ ಒಳಪಟ್ಟ ಯುವಕ ಯುವತಿಯರು ಭಾರತ್ ಜೋಡೋ ಯುವ ಸಂಘದಲ್ಲಿ ನೋಂದಾಣಿ ಮಾಡಿಕೊಳ್ಳಬೇಕು ಎಂದರು.

ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ ಮಾತನಾಡಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಹಿಂದುಳಿದ ವರ್ಗಗಳಿಗೆ ಅವಕಾಶ ನೀಡಿದವರು ಡಿ. ದೇವರಾಜ ಅರಸು.

ವಿದ್ಯಾಭ್ಯಾಸಕ್ಕೆ ಶಕ್ತಿ ನೀಡಿ, ವಿದ್ಯೆ ಕಲಿಯಲು ಯಾವುದೇ ರೀತಿಯ ಜಾತಿ ಭೇದ ಭಾವವಿಲ್ಲವೆಂದು ಸಮಾಜಕ್ಕೆ ತಿಳಿಸಿಕೊಟ್ಟರು. ಅರಸು ಅವರ ಜಯಂತಿಯನ್ನು ಪ್ರತಿ ಗ್ರಾಮದಲ್ಲಿ, ಪಂಚಾಯಿತಿಯಲ್ಲಿ, ನಗರದಲ್ಲೂ ಆಚರಣೆ ಮಾಡಬೇಕು ಎಂದು ಹೇಳಿದರು.

ಗ್ರಾಮೀಣ ಬದುಕಿನ ವಾಸ್ತವತೆ, ರೈತರ ಸಂಕಷ್ಟ, ಬಡತನ, ಸಾಮಾಜಿಕ ಅಸಮಾನತೆ ಹಾಗೂ ಅವಕಾಶಗಳ ಕೊರತೆಯನ್ನು ಹತ್ತಿರದಿಂದ ಕಂಡು ಬೆಳೆದ ಅವರ ವ್ಯಕ್ತಿತ್ವ ತುಂಬಾ ವಿಶೇಷವಾಗಿದೆ ಎಂದು ಹೇಳಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಶುಭಂ ಶುಕ್ಲಾ ಮಾತನಾಡಿ, ರೈತನಿಗೆ ಭೂಮಿ ಎಂದರೇ ಕೇವಲ ಆಸ್ತಿಯಲ್ಲ, ಅದು ಜೀವನೋಪಾಯದ ಆಧಾರ. ಆತ್ಮಗೌರವದ ಸಂಕೇತ ಹಾಗೂ ಸಮಾಜದಲ್ಲಿ ತನ್ನ ಸ್ಥಾನವನ್ನು ಕಟ್ಟಿಕೊಳ್ಳುವ ಪ್ರಮುಖ ಸಾಧನ ಎಂದರು.

ಅರಸು ಅವರ ಆಡಳಿತವು ಸಾಮಾಜಿಕ ನ್ಯಾಯಕ್ಕೆ ಮಾತ್ರ ಸೀಮಿತವಾಗಿರಲಿಲ್ಲ, ಗ್ರಾಮೀಣಾಭಿವೃದ್ಧಿ, ಬಡವರ ಕಲ್ಯಾಣ, ಉದ್ಯೋಗಾವಕಾಶ, ಶಿಕ್ಷಣ ಮತ್ತು ಆರ್ಥಿಕ ಸಬಲೀಕರಣಕ್ಕೂ ಮಹತ್ವ ದಾರಿಯಾಗಿತ್ತು. ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರು ಬಂದದ್ದು ಕನ್ನಡ ನಾಡಿನ ಇತಿಹಾಸದಲ್ಲಿ ಮಹತ್ವದ ಘಟ್ಟವಾಗಿದೆ ಇಂತಹ ಸಾಧನೆಗೆ ದೇವರಾಜ ಅರಸು ಅವರು ಹೆಸರು ವಾಸಿಯಾಗಿದ್ದಾರೆ ಎಂದು ಹೇಳಿದರು.

ತುಮಕೂರು ವಿಶ್ವವಿದ್ಯಾನಿಲಯದ ಕುಲ ಸಚಿವರಾದ ಡಾ. ಮೋಹನ್ ಚಂದ್ರಗುತ್ತಿ ಮಾತನಾಡಿ, ದೇವರಾಜ್ ಅರಸು ಅವರು ಬಡ ಕುಟುಂಬದಿಂದ ಬಂದು ಹೋರಾಟಗಾರರಾಗಿ ಸಮಾಜದಲ್ಲಿ ಪ್ರಾಮುಖ್ಯತೆ ಪಡೆದಿದ್ದರೆ ಎಂದು ಹೇಳಿದರು.

ದೇವರಾಜ ಅರಸು ಅವರು ಕೇವಲ ಒಬ್ಬ ರಾಜಕಾರಣಿಯಾಗಿರಲಿಲ್ಲ, ಬದಲಿಗೆ ಸಾಮಾಜಿಕ ಸಮಾನತೆಯನ್ನು ತರಲು ಶ್ರಮಿಸಿದ ಮಹಾನ್ ಸಮಾಜ ಸುಧಾರಕರಾಗಿದ್ದರು. ಉಳುವವನೇ ಭೂಮಿಯ ಒಡೆಯ ಎಂಬ ಕಾನೂನಿನ ಮೂಲಕ ಸಾವಿರಾರು ಭೂಹೀನ ರೈತರಿಗೆ ಜಮೀನು ಸಿಗುವಂತೆ ಮಾಡಿದರು ಡಿ. ದೇವರಾಜ ಅರಸು. ಜೀತ ಪದ್ಧತಿ, ಮಲಹೊರುವ ಪದ್ಧತಿ ನಿರ್ಮೂಲನೆಯ ಮೂಲಕ ಸಾಮಾಜಿಕ ಪರಿವರ್ತನೆಗೆ ಶ್ರಮಿಸಿದ್ದಾರೆ ಎಂದು ತಿಳಿಸಿದರು.

ಉಪ ವಿಭಾಗಾಧಿಕಾರಿ ಜಗದೀಶ್ ಗಂಗಣ್ಣನವರ್, ಹಿಂದುಳಿದ ವರ್ಗ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಎಂ. ಕುಮಾರ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ರಂಜಿತ್ ಗೊರೂರು ಇತರರಿದ್ದರು.

## ಜಾಗೃತಿ ಜಾಥಾಗೆ ಅದ್ದೂರಿ ಚಾಲನೆ

ಡಿ. ದೇವರಾಜ ಅರಸು ಅವರು ಮಾಜಿ ಸಚಿವ ಹಾಗೂ ಎರಡನೇ ಮಾಜಿ ಮುಖ್ಯಮಂತ್ರಿ ರಾಜ್ಯ ಹಾಗೂ ದೇಶದ ಎಲ್ಲಾ ನಾಗರಿಕರಿಗೆ ಕೀರ್ತಿ ತಂದುಕೊಟ್ಟಿದ್ದಾರೆ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶುಭಂ ಶುಕ್ಲಾ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಡಿ. ದೇವರಾಜ ಅರಸು ಅವರ 111ನೇ ಜನ್ಮ ದಿನಾಚರಣೆ ಅಂಗವಾಗಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮೆರವಣಿಗೆಗೆ ಚಾಲನೆ ನೀಡಿದ ಅವರು, ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿ ಸ್ವಾತಂತ್ರ ಹೋರಾಟಗಾರರಾಗಿ ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ನೀಡಿದ್ದಾರೆ. ಭೂ ಸುಧಾರಣೆ ಹಿಂದುಳಿದ ವರ್ಗ ಕಲ್ಯಾಣಗಳಲ್ಲಿ ಡಿ.ದೇವರಾಜ್ ಅರಸು ಅವರ ಪಾತ್ರ ಅಪಾರವಾದದ್ದು ಎಂದು ತಿಳಿಸಿದರು.

ಉಪವಿಭಾಗಾಧಿಕಾರಿ ಜಗದೀಶ್ ಗಂಗಣ್ಣನವರ್,



ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ರಂಜಿತ್ ಗೊರೂರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಎಂ. ಕುಮಾರ್ ಮತ್ತಿತರರು ಹಾಜರಿದ್ದರು.

## ನಾಟಕ ಅಕಾಡೆಮಿ ವಾರ್ಷಿಕ ಪ್ರಶಸ್ತಿ ಶಿವಾನಂದ ತಗಡೂರು ಭಾಜನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರು 2026-27ನೇ ಸಾಲಿನ ಕರ್ನಾಟಕ ನಾಟಕ ಅಕಾಡೆಮಿ ವಾರ್ಷಿಕ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ವಿವಿಧ ಜಿಲ್ಲೆಯ 32 ಜನರನ್ನು ವಾರ್ಷಿಕ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಚನ್ನರಾಯಪಟ್ಟಣ ತಾಲ್ಲೂಕು ತಗಡೂರು ಗ್ರಾಮದ ಶಿವಾನಂದ ಅವರು 1985-86ರಲ್ಲಿ ರಂಗ ಪ್ರವೇಶ ಮಾಡಿದ್ದಾರೆ. ಪ್ರೌಢಶಾಲಾ ಶಿಕ್ಷಣದ ಅವಧಿಯಲ್ಲಿ ಬೇಲೂರು ಕೃಷ್ಣಮೂರ್ತಿ ವಿರಚಿತ ಕುದುರೆ ಮೊಟ್ಟೆ ಮತ್ತು ತ್ಯಾಗಿ ನಾಟಕಗಳ ಮೂಲಕ ರಂಗಭೂಮಿ ಪ್ರವೇಶಿಸಿದ ಅವರು ತಾಲ್ಲೂಕು ಮಟ್ಟದ ನಾಟಕ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಪಡೆದು ತಮ್ಮ ಛಾಪು ಮೂಡಿಸಿದರು.

1987ರಿಂದ 1990ರ ತನಕ ಎಲ್.ವಿ. ಪಾಲಿಟೆಕ್ನಿಕ್‌ನಲ್ಲಿ ನಡೆದ ವಾರ್ಷಿಕ ನಾಟಕ ಪ್ರದರ್ಶನಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಸಾಕ್ಷರತಾ ಆಂದೋಲನ ಬೀದಿ ನಾಟಕಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರುವ ಅವರು ಜಿಲ್ಲೆಯ 800ಕ್ಕೂ ಹೆಚ್ಚು ಗ್ರಾಮಗಳಿಗೆ ಭೇಟಿ ನೀಡಿದ್ದಾರೆ. ಬೆಂಗಳೂರಿನ ಕೊಳಚೆ ಪ್ರದೇಶಗಳಲ್ಲಿ ಒಂದು ವಾರ ಬೀದಿ ನಾಟಕಗಳ ಮೂಲಕ ಜನಜಾಗೃತಿ ಮೂಡಿಸಿದ್ದಾರೆ. ಹಾಸನದ ನಾಟಕಾಸಕ್ತರೊಂದಿಗೆ ಸೇರಿ ರಂಗಸಿರಿ ಸಂಸ್ಥೆಯ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರ ವಹಿಸಿ, ಹಲವು ವರ್ಷಗಳ ಕಾಲ ರಂಗ ಸಂಘಟಕರಾಗಿ ಸೇವೆ ಸಲ್ಲಿಸಿದ್ದಾರೆ. ಸಂಗ್ಯಾ-ಬಾಳ್ಯಾ ಮತ್ತು ತೆಂಕ-ಬಡಗ ಇವರು ಅಭಿನಯಿಸಿದ ಪ್ರಮುಖ ನಾಟಕಗಳು.

## ಅಂಗನವಾಡಿ ಕಾರ್ಯಕರ್ತೆ ಸಹಾಯಕಿ ಹುದ್ದೆಗೆ ಅರ್ಜಿ ಆಹ್ವಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಚನ್ನರಾಯಪಟ್ಟಣ ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಯಲ್ಲಿ ಮಿಷನ್ ಶಕ್ತಿ ಯೋಜನೆಯ ಸಾಮರ್ಥ್ಯ ಉಪ ಯೋಜನೆಯ ಪಾಲನಾ ಉಪ ಯೋಜನೆಯಡಿಯಲ್ಲಿ ಪ್ರಾರಂಭಗೊಂಡಿರುವ 8 ಅಂಗನವಾಡಿ ಕಂ.ಕ್ರಷನ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಹುದ್ದೆಗಳಿಗೆ ಆಯ್ಕೆ ಮಾಡಲು ಸ್ಥಳೀಯ ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ ಎಂದು ಚನ್ನರಾಯಪಟ್ಟಣ ಶಿಶು ಅಭಿವೃದ್ಧಿ ಯೋಜನಾಧಿಕಾರಗಳು ತಿಳಿಸಿದ್ದಾರೆ. ಸೆ.19 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿರುತ್ತದೆ, ಅರ್ಜಿ ನಮೂನೆಯನ್ನು ಚನ್ನರಾಯಪಟ್ಟಣ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ಪಡೆದು ಅವಶ್ಯಕ ದಾಖಲಾತಿಗಳೊಂದಿಗೆ ಮುಚ್ಚಿದ ಲಕೋಟೆಯಲ್ಲಿ ಕಚೇರಿಗೆ ಸಲ್ಲಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

## ಸಕಲೇಶಪುರ ತೇಜಸ್ವಿ ವೃತ್ತ ವಿಸ್ತರಣೆಗೆ ಸಿದ್ಧತೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಪಟ್ಟಣದ ತೇಜಸ್ವಿ ವೃತ್ತದಲ್ಲಿ ಹೆಚ್ಚುತ್ತಿರುವ ಅಪಘಾತ ಹಾಗೂ ಸಂಚಾರ ದಟ್ಟಣೆ ನಿಯಂತ್ರಿಸುವ ಉದ್ದೇಶದಿಂದ ವೃತ್ತದ ಅಗಲೀಕರಣಕ್ಕೆ ಅಳತೆ ಕಾರ್ಯ ಆರಂಭಿಸಲಾಗಿದೆ ಎಂದು ಯೋಜನಾ ಪ್ರಾಧಿಕಾರದ ಅಧ್ಯಕ್ಷ ಸಯ್ಯದ್ ಮುಫೀಜ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ತೇಜಸ್ವಿ ವೃತ್ತದ ಬಳಿ ಪದೇ ಪದೇ ಅಪಘಾತಗಳು ಸಂಭವಿಸುತ್ತಿದ್ದು, ಸಂಚಾರ ಸಮಸ್ಯೆಯೂ ಹೆಚ್ಚಾಗಿರುವ ಹಿನ್ನಲೆಯಲ್ಲಿ ಸುಮಾರು 15 ದಿನಗಳ ಹಿಂದೆ ಜಿಲ್ಲಾಧಿಕಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ವೃತ್ತವನ್ನು ಅಗಲೀಕರಣಗೊಳಿಸುವುದರ ಜತೆಗೆ ವೃತ್ತದಿಂದ 200 ಮೀಟರ್ ವ್ಯಾಪ್ತಿಯಲ್ಲಿ ಹಾಗೂ ಅರೇಹಳ್ಳಿ ರಸ್ತೆ



ಭಾಗದಲ್ಲಿಯೂ ಅಗತ್ಯವಿರುವಷ್ಟು ರಸ್ತೆ ಅಗಲೀಕರಣ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದರು. ಈ ಸೂಚನೆಯಂತೆ ಗುರುವಾರ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಅಳತೆ ಕಾರ್ಯ ಕೈಗೊಂಡಿದ್ದಾರೆ ಎಂದು ತಿಳಿಸಿದರು.

ವೃತ್ತದ ಅಗಲೀಕರಣ ಹಾಗೂ ತೆರವು ಕಾರ್ಯಕ್ಕೆ ಅಂಗಡಿ ಮಾಲೀಕರು ಹಾಗೂ ಸಾರ್ವಜನಿಕರು ಸಹಕರಿಸಬೇಕು. ಈ ಕುರಿತು ಜಿಲ್ಲಾಧಿಕಾರಿಗಳನ್ನೂ ಸ್ಥಳಕ್ಕೆ ಕರೆಸಿ, ಅವರ ಮಾರ್ಗದರ್ಶನದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಸಾರ್ವಜನಿಕರ ಸುರಕ್ಷತೆ ಹಾಗೂ ಸುಗಮ ಸಂಚಾರದ ದೃಷ್ಟಿಯಿಂದ ಎಲ್ಲರೂ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಪುರಸಭಾ ಮುಖ್ಯಾಧಿಕಾರಿ ಮಹೇಶ್ವರಪ್ಪ ಮಾತನಾಡಿ, ಜಿಲ್ಲಾಧಿಕಾರಿಗಳು ಇತ್ತೀಚೆಗೆ ಸಕಲೇಶಪುರ ಪಟ್ಟಣಕ್ಕೆ ಭೇಟಿ ನೀಡಿ ಅಭಿವೃದ್ಧಿ ಹಾಗೂ ಸಾರ್ವಜನಿಕರ ಸಮಸ್ಯೆಗಳ ಕುರಿತು ಪರಿಶೀಲನೆ ನಡೆಸಿದ್ದರು. ಈ ವೇಳೆ ತೇಜಸ್ವಿ ವೃತ್ತ ಕಿರಿದಾಗಿರುವುದರಿಂದ ಸಂಚಾರಕ್ಕೆ ತೊಂದರೆಯಾಗುತ್ತಿರುವುದನ್ನು ಗಮನಿಸಿ, ವೃತ್ತವನ್ನು ತುರ್ತಾಗಿ ಅಗಲೀಕರಣಗೊಳಿಸುವಂತೆ ಸೂಚಿಸಿದ್ದರು ಎಂದರು.

ಜಿಲ್ಲಾಧಿಕಾರಿಗಳ ಸೂಚನೆಯಂತೆ ಸಂಬಂಧಪಟ್ಟ ಅಧಿಕಾರಿಗಳು, ಲೋಕೋಪಯೋಗಿ ಇಲಾಖೆ, ಪಟ್ಟಣ ಯೋಜನಾ ವಿಭಾಗ ಹಾಗೂ ಯೋಜನಾ ಪ್ರಾಧಿಕಾರದ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ವೃತ್ತದ ಅಗಲೀಕರಣಕ್ಕೆ ಸಂಬಂಧಿಸಿದಂತೆ ಅಳತೆ ಕಾರ್ಯ ಕೈಗೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಅಗಲೀಕರಣ ಕಾಮಗಾರಿ ಕೈಗೊಳ್ಳಲಾಗುವುದು ಎಂದು ಹೇಳಿದರು.

ಯೋಜನಾ ಪ್ರಾಧಿಕಾರದ ಸದಸ್ಯರಾದ ಚರಣ್, ಬೈಕೆರೆ ದೇವರಾಜ್, ಸಹಾಯಕ ನಿರ್ದೇಶಕ ರಮೇಶ್, ಲೋಕೋಪಯೋಗಿ ಇಲಾಖೆಯ ಸಹಾಯಕ ಎಂಜಿನಿಯರ್ ರಜಾಕ್ ಸೇರಿದಂತೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಕಷ್ಟದ ಹಾದಿ ಎದುರಿಸಿದರಷ್ಟೇ ಮಹನೀಯರಾಗಲು ಸಾಧ್ಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಮಹಾನ್ ವ್ಯಕ್ತಿಗಳ ಜೀವನವೂ ಕಷ್ಟದ ಹಾದಿಯಿಂದ ಕೂಡಿರುತ್ತದೆ. ಆ ಕಷ್ಟಗಳನ್ನು ಸಮರ್ಥವಾಗಿ ಎದುರಿಸಿ ಮುನ್ನಡೆದಾಗ ಮಾತ್ರ ಮಹನೀಯರಾಗಿ ಬೆಳೆಯಲು ಸಾಧ್ಯ ಎಂದು ತಹಶೀಲ್ದಾರ್ ಕೆ.ಸಿ. ಸೌಮ್ಯ ಹೇಳಿದರು.

ಪಟ್ಟಣದ ದೇವರಾಜು ಅರಸು ಭವನದಲ್ಲಿ ಗುರುವಾರ ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ 111ನೇ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಮಾಜದ ಏಳಿಗೆಗಾಗಿ ಶ್ರಮಿಸಿದ ಮಹನೀಯರ ಜೀವನಾದರ್ಶಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು. ಮುಖ್ಯವಾಗಿ ಇಂತಹ ಮಹನೀಯರ



ಜಯಂತಿಯನ್ನು ಪ್ರತಿಯೊಂದು ಮನೆಯಲ್ಲೂ ಆಚರಿಸುವ ಮೂಲಕ ಅವರ ಆದರ್ಶಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸಿ, ಸಮಾಜದ ಅಭಿವೃದ್ಧಿಗೆ ಎಲ್ಲರೂ ಕೈಜೋಡಿಸಬೇಕು ಎಂದು ಹೇಳಿದರು.

ತಾಲೂಕು ಹಿಂದುಳಿದ ವರ್ಗಗಳ ಒಕ್ಕೂಟದ ಅಧ್ಯಕ್ಷ ಕೃಷ್ಣೇಗೌಡ ಮಾತನಾಡಿ, ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಶಿಕ್ಷಣಕ್ಕೆ ಆದ್ಯತೆ ನೀಡಿದ ದೇವರಾಜ ಅರಸು ಅವರು ಬಡವರಿಗೆ ಭೂಮಿ ದೊರಕಿಸುವ ಮೂಲಕ ಸಾಮಾಜಿಕ ಪರಿವರ್ತನೆಗೆ ಮುನ್ನುಡಿ ಬರೆದರು. ಅಧಿಕಾರದಲ್ಲಿದ್ದ ಅವಧಿಯಲ್ಲಿ ಹಲವು ಸವಾಲುಗಳನ್ನು ಎದುರಿಸಿದರೂ ವೈಯಕ್ತಿಕ ಕಷ್ಟಗಳನ್ನು ಮರೆತು ದೀನದಲಿತರ ಅಭಿವೃದ್ಧಿಗೆ ಪಣತೊಟ್ಟ ನಾಯಕರು ಎಂದು ಸ್ಮರಿಸಿದರು.

ಪ್ರಧಾನ ಭಾಷಣ ಮಾಡಿದ ವಿದ್ಯಾರಾಜ್ ಅರಸು, ರಾಜಕೀಯದ ಮೂಲಕ ಸಮಾಜದ ಅಭಿವೃದ್ಧಿಗೆ ಉತ್ತಮ ಕೆಲಸ ಮಾಡಬಹುದು ಎಂಬ ನಂಬಿಕೆಯನ್ನು ಹೊಂದಿದ್ದ ಅಪರೂಪದ ವ್ಯಕ್ತಿತ್ವ ದೇವರಾಜ ಅರಸು ಅವರದ್ದಾಗಿತ್ತು. 1940ರಲ್ಲೇ ಸಮಾಜ ಸೇವೆಗೆ ತಮ್ಮನ್ನು ತೊಡಗಿಸಿಕೊಂಡ ಅವರು, ಎಸ್. ನಿಜಲಿಂಗಪ್ಪ ಅವರ ಬೆಂಬಲದಿಂದ ರಾಜಕೀಯವಾಗಿ ಬೆಳೆಯಲು ಸಾಧ್ಯವಾಯಿತು ಎಂದರು.

ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ರಂಗಸ್ವಾಮಿ, ಸತೀಶ್, ಕಂದಾಯ ನಿರೀಕ್ಷಕ ಲೋಕೇಶ್, ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ಉಳಗಾಡ್ಡಿ, ಉಮೇಶ್, ಅಜಿತ್ ಇತರರಿದ್ದರು. ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳು ಹಾಗೂ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು.

# ಮೊಬೈಲ್ ಶಾಪ್ ಮಾಲೀಕರಿಗೆ ಮೋಸ ಮಾಡಿದ ಸಿಬ್ಬಂದಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಮೊಬೈಲ್ ಶಾಪ್‌ನ ಸಿಬ್ಬಂದಿಯೇ ಸುಮಾರು 8 ಲಕ್ಷ ರೂ. ದುರುಪಯೋಗ ಮಾಡಿಕೊಂಡು ನಾಪತ್ತೆಯಾಗಿರುವ ಘಟನೆ ಬಾಳ್ಳುಪೇಟೆಯಲ್ಲಿ ಬೆಳಕಿಗೆ ಬಂದಿದೆ.

ಬಾಳ್ಳುಪೇಟೆಯ ದುರ್ಗಾ ಮೊಬೈಲ್ಸ್ ಅಂಗಡಿಯ ಮಾಲೀಕ ಕಿಶೋರ್ ಅವರು ಈ ಸಂಬಂಧ ಬೆಳಗೋಡು ಗ್ರಾಮದ ಇಮ್ರಾನ್ ಎಂಬಾತನ ವಿರುದ್ಧ ಹಣ ದುರುಪಯೋಗ ಹಾಗೂ ಮೊಬೈಲ್‌ಗಳನ್ನು ಕಳವು ಮಾಡಿರುವ ಆರೋಪದಡಿ ಪೊಲೀಸರಿಗೆ ದೂರು ನೀಡಿದ್ದಾರೆ.

ದೂರುದಾರ ಕಿಶೋರ್ ಅವರು ಬಾಳ್ಳುಪೇಟೆಯಲ್ಲಿ ಎರಡು ಮೊಬೈಲ್ ಅಂಗಡಿಗಳನ್ನು ನಡೆಸುತ್ತಿದ್ದು, ಈ ಪೈಕಿ ಒಂದು ಅಂಗಡಿಯ ಜವಾಬ್ದಾರಿಯನ್ನು ಇಮ್ರಾನ್‌ಗೆ ವಹಿಸಿಕೊಟ್ಟಿದ್ದರು. ಕಳೆದ ಸುಮಾರು ಆರು ವರ್ಷಗಳಿಂದ ಅಂಗಡಿಯ ವ್ಯವಹಾರ ನೋಡಿಕೊಳ್ಳುತ್ತಿದ್ದ ಇಮ್ರಾನ್, ಪ್ರತಿದಿನದ ವ್ಯಾಪಾರದ ವಿವರ ಹಾಗೂ ಹಣದ ಲೆಕ್ಕವನ್ನು ಕಿಶೋರ್ ಅವರಿಗೆ ನೀಡುತ್ತಿದ್ದ. ಬಳಿಕ ಮೊಬೈಲ್ ಕಂಪನಿಗಳಿಗೆ ಅಥವಾ ಬ್ಯಾಂಕ್‌ಗೆ ಹಣ ಜಮಾ ಮಾಡುವಂತೆ ಸೂಚಿಸಲಾಗುತ್ತಿತ್ತು ಎನ್ನಲಾಗಿದೆ.

ಇತ್ತೀಚೆಗೆ ಅಂಗಡಿಯ ವ್ಯವಹಾರದ ಬಗ್ಗೆ ಅನುಮಾನ ಮೂಡಿದ ಹಿನ್ನೆಲೆಯಲ್ಲಿ ಮೊಬೈಲ್ ಕಂಪನಿಗಳಿಗೆ ಹಣ ಜಮಾ ಮಾಡಿರುವ ಕುರಿತು ಪರಿಶೀಲಿಸಿದಾಗ, ಇದೇ ವರ್ಷ ಜೂನ್‌ನಲ್ಲಿ 2,34,736 ರೂ. (ಚೆಕ್ ಸಂಖ್ಯೆ 72008300) ಹಾಗೂ 2,35,308 ರೂ. (ಚೆಕ್ ಸಂಖ್ಯೆ 72017651) ಮೊತ್ತವನ್ನು ಚೆಕ್ ಮೂಲಕ ಆರ್‌ಟಿಜಿಎಸ್ ಮುಖಾಂತರ ಮೊಬೈಲ್ ಕಂಪನಿಗಳಿಗೆ ಪಾವತಿಸುವುದಾಗಿ ಹಣ ಹಾಗೂ ಚೆಕ್‌ಗಳನ್ನು ಪಡೆದಿದ್ದರೂ, ಹಣವನ್ನು




ಬ್ಯಾಂಕ್‌ಗೆ ಜಮಾ ಮಾಡಿರುವುದು ಕಂಡುಬಂದಿಲ್ಲ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಅಲ್ಲದೆ, ಚೆಕ್‌ಗಳನ್ನೂ ಹಿಂದಿರುಗಿಸದೆ ತನ್ನ ಬಳಿಯೇ ಇಟ್ಟುಕೊಂಡಿದ್ದಾನೆ ಎಂದು ಆರೋಪಿಸಲಾಗಿದೆ. ಅಂಗಡಿಯಲ್ಲಿದ್ದ ವಿವಿಧ ಕಂಪನಿಗಳಿಗೆ ಸೇರಿದ ಸುಮಾರು ಎಂಟು ಮೊಬೈಲ್‌ಗಳನ್ನು ಅವುಗಳ ಖಾಲಿ ಬಾಕ್ಸ್‌ಗಳನ್ನು ಅಂಗಡಿಯಲ್ಲೇ ಬಿಟ್ಟು, ಯಾರಿಗೂ ತಿಳಿಯದಂತೆ ತೆಗೆದುಕೊಂಡು ಹೋಗಿದ್ದಾನೆ.

ಕಳುವಾಗಿರುವ ಮೊಬೈಲ್‌ಗಳ ಒಟ್ಟು ಅಂದಾಜು ಮೌಲ್ಯ ಸುಮಾರು 2 ಲಕ್ಷ ರೂ. ಎಂದು ದೂರಿನಲ್ಲಿ ತಿಳಿಸಲಾಗಿದೆ.

ಅಂಗಡಿಯ ಸಿಸಿ ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲಿಸಿದಾಗ, ತನ್ನ ಕೃತ್ಯ ಯಾರಿಗೂ ತಿಳಿಯದಂತೆ ಮಾಡಲು ಇಮ್ರಾನ್‌ನೇ ಸಿಸಿ ಕ್ಯಾಮೆರಾವನ್ನು ಬದಲಾಯಿಸಿರುವುದು ಕಂಡುಬಂದಿದೆ ಎಂದು ಕಿಶೋರ್ ಆರೋಪಿಸಿದ್ದಾರೆ.

ಇದರ ಜೊತೆಗೆ ಕಳೆದ ಒಂದು ವಾರದಿಂದ ಇಮ್ರಾನ್ ಸಂಪರ್ಕಕ್ಕೆ ಸಿಗದೆ, ಸರಿಯಾದ ಮಾಹಿತಿ ನೀಡದೆ ಸತಾಯಿಸುತ್ತಿದ್ದು, ಅಂಗಡಿಯ ವ್ಯಾಪಾರದ ಹಣ ಹಾಗೂ ಉಳಿಕೆ ಹಣ ಸೇರಿ ಸುಮಾರು 1.20 ಲಕ್ಷ ರೂ. ವನ್ನು ತೆಗೆದುಕೊಂಡು ಹೋಗಿದ್ದಾನೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಹಣ ಹಾಗೂ ಮೊಬೈಲ್‌ಗಳನ್ನು ದುರುಪಯೋಗಪಡಿಸಿಕೊಂಡಿರುವ ಆರೋಪದ ಹಿನ್ನೆಲೆಯಲ್ಲಿ ಇಮ್ರಾನ್ ವಿರುದ್ಧ ಕಾನೂನು ಕ್ರಮ ಕೈಗೊಂಡು, ತಮ್ಮ ಹಣವನ್ನು ವಾಪಸ್ ಕೊಡಿಸಿಕೊಡಬೇಕು ಎಂದು ಕಿಶೋರ್ ಪೊಲೀಸರಿಗೆ ಮನವಿ ಮಾಡಿದ್ದಾರೆ. ದೂರಿನ ಆಧಾರದ ಮೇಲೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

# ಶಾಲೆಗಳಲ್ಲಿ ಮಕ್ಕಳ ರಕ್ಷಣಾ ನೀತಿ ಅನುಷ್ಠಾನ ಕಡ್ಡಾಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯ ಎಲ್ಲಾ ಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆಯನ್ನು ಆದ್ಯತೆಯಾಗಿ ಪರಿಗಣಿಸುವುದರ ಜೊತೆಗೆ ಮಕ್ಕಳ ರಕ್ಷಣಾ ನೀತಿಯನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಬೇಕೆಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಸಂತೋಷ್ ಕುಮಾರ್ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿ, ಮಕ್ಕಳಿಗೆ ಪೋಕ್ಸೋ ಕಾಯ್ದೆ ಬಗ್ಗೆ ಹೆಚ್ಚಿನ ಮಾಹಿತಿ ನೀಡಬೇಕು. ವಸತಿ ಶಾಲೆಗಳಲ್ಲಿ ಪೌಷ್ಟಿಕ ಆಹಾರ ನೀಡಬೇಕು. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಿ ಮರಳಿ ಶಾಲೆಗೆ ಸೇರಿಸುವಂತಹ ಕೆಲಸ ಮಾಡುವಂತೆ ಸೂಚಿಸಿದರು.

ಪೊಲೀಸ್ ಹಾಗೂ ಶಾಲಾ ಶಿಕ್ಷಣ ಇಲಾಖೆ ಅಧಿಕಾರಿಗಳು ಶಾಲೆಗಳಿಗೆ ಭೇಟಿ ನೀಡಿ ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಪ್ರತಿ ಪೊಲೀಸ್ ಠಾಣೆಯಲ್ಲಿ ಮಕ್ಕಳ ರಕ್ಷಣಾ ಸಮಿತಿಗಳು ಕಾರ್ಯನಿರ್ವಹಿಸಬೇಕು ಎಂದರು.



ಶಾಲೆಗಳಿಗೆ ಹಾಗೂ ವಸತಿ ಶಾಲೆಗಳಲ್ಲಿ ದೂರು ಪೆಟ್ಟಿಗೆಯನ್ನು ಕಡ್ಡಾಯವಾಗಿ ಅಳವಡಿಸಬೇಕು. ಶಾಲೆ ಕಾಲೇಜು ಆರಂಭ ಹಾಗೂ ಮುಕ್ತಾಯದ ಹಂತದಲ್ಲಿ ಪೊಲೀಸ್ ಇಲಾಖೆಯಿಂದ ಗಸ್ತು ತಿರುಗಬೇಕು. ಹಿಂದುಳಿದ ವರ್ಗಗಳ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ಅಲ್ಪಸಂಖ್ಯಾತರ ಇಲಾಖೆಯ ವಸತಿ ನಿಲಯಗಳಿಗೆ ಭೇಟಿ ನೀಡಿದ ವೇಳೆಯಲ್ಲಿ ಮೆಡಿಕಲ್ ಕಿಟ್ ಇರುವುದಿಲ್ಲ. ಮೆಡಿಕಲ್ ಕಿಟ್ ಅವಧಿ ಮುಕ್ತಾಯವಾಗಿರುತ್ತದೆ. ಗ್ರಂಥಾಲಯ ರಿಜಿಸ್ಟ್ರಾರ್, ದಾಸ್ತಾನು ರಿಜಿಸ್ಟ್ರಾರ್‌ಗಳು ನಮೂದಿಸಿರುವುದಿಲ್ಲ, ಸ್ಯಾನಿಟರ್ ಪ್ಯಾಕ್ ನೀಡಿರುವುದಿಲ್ಲ. ಆರೋಗ್ಯ ತಪಾಸಣೆ ಆಗಿಲ್ಲದಿರುವುದು ಕಂಡುಬಂದಿದ್ದು ಸಂಬಂಧಪಟ್ಟವರಿಗೆ ನೋಟೀಸ್ ನೀಡುವಂತೆ ನಿರ್ದೇಶನ ನೀಡಿದರು.

ವಸತಿ ನಿಲಯ ಹಾಗೂ ವಸತಿ ಶಾಲೆಗಳಲ್ಲಿ ಹೊರಗುತ್ತಿಗೆಯ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಹಿನ್ನೆಲೆ ಹಾಗೂ ನಡವಳಿಕೆ ತಿಳಿದುಕೊಳ್ಳುವ ನಿಟ್ಟಿನಲ್ಲಿ ಪೊಲೀಸ್ ತಪಾಸಣೆ ಮಾಡಿಸಬೇಕು. ಜಿಲ್ಲಾ ಮಟ್ಟದ ಅಧಿಕಾರಿಗಳು ವಸತಿ ನಿಲಯ ಹಾಗೂ ವಸತಿ ಶಾಲೆಗಳಿಗೆ ಭೇಟಿ ನೀಡಿ ಪರಿಶೀಲಿಸುವಂತೆ ಸೂಚಿಸಿದರು.

ಜಿಲ್ಲೆಯ ಅಂಗನವಾಡಿ ಕೇಂದ್ರಗಳಲ್ಲಿ ಮೂಲಸೌಲಭ್ಯಗಳು ಇರಬೇಕು. ಗ್ರಾಮೀಣ ಭಾಗದ ಮಕ್ಕಳಿಗೆ ತಹಶೀಲ್ದಾರ್ ಹಾಗೂ ಕಾರ್ಯನಿರ್ವಹಕ ಅಧಿಕಾರಿಗಳು ಮೇಲುಸ್ತುವಾರಿ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳ ರಕ್ಷಣಾ ಕಾಯಿದೆಗಳು, ಹಕ್ಕುಗಳ ಬಗ್ಗೆ ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂದು ಸೂಚಿಸಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಧಿಕಾರಿ ಶುಭಂ ಶುಕ್ಲಾ ಮಾತನಾಡಿ, ಆಯೋಗದ ಅಧ್ಯಕ್ಷರು ಕೆಲವು ವಸತಿ ನಿಲಯಗಳಿಗೆ ಭೇಟಿ ನೀಡಿದ ವೇಳೆಯಲ್ಲಿ ಕಂಡುಬಂದ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಿ ಆಯೋಗಕ್ಕೆ ವರದಿ ಸಲ್ಲಿಸುವಂತೆ ತಿಳಿಸಿದರು.

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಸತ್ಯನಾರಾಯಣ ಶೆಟ್ಟಿ, ಅಪರ ಜಿಲ್ಲಾಧಿಕಾರಿ ಹೆಚ್.ಕೆ.ಕೃಷ್ಣಮೂರ್ತಿ ಉಪಸ್ಥಿತರಿದ್ದರು.

# ಪ್ರಗತಿಗೆ ಮುನ್ನುಡಿ ಬರೆದ ಮಹಾನುಭಾವರು ಅರಸು-ರಾಜೀವ್ ಗಾಂಧಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಭಾರತಕ್ಕೆ ತಂತ್ರಜ್ಞಾನ ಮತ್ತು ಸಂಪರ್ಕ ಕ್ರಾಂತಿಯ ಪರಿಚಯ ಮಾಡಿಕೊಟ್ಟ ಮಾಜಿ ಪ್ರಧಾನಿ ದಿ. ರಾಜೀವ್ ಗಾಂಧಿ ಹಾಗೂ ಸಾಮಾಜಿಕ ನ್ಯಾಯದ ಹರಿಕಾರ, ಮಾಜಿ ಮುಖ್ಯಮಂತ್ರಿ ದಿವಂಗತ ಡಿ. ದೇವರಾಜ ಅರಸು ಅವರು ತಮ್ಮ ಜನಪರ ಕೊಡುಗೆಗಳ ಮೂಲಕ ದೇಶದ ಜನರ ಹೃದಯದಲ್ಲಿ ಶಾಶ್ವತ ಸ್ಥಾನ ಪಡೆದಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ಹಿಂದುಳಿದ ವರ್ಗಗಳ (ಒಬಿಸಿ) ವಿಭಾಗದ ಅಧ್ಯಕ್ಷ ಮಂಗಳಾಪುರ ನಾಗರಾಜ್ ತಿಳಿಸಿದರು.

ನಗರದ ಜಿಲ್ಲಾ ಕಾಂಗ್ರೆಸ್ ಭವನದಲ್ಲಿ ಗುರುವಾರ ಆಯೋಜಿಸಿದ್ದ ರಾಜೀವ್ ಗಾಂಧಿ ಹಾಗೂ ಡಿ. ದೇವರಾಜ ಅರಸು ಅವರ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ನಾಯಕರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಸಲ್ಲಿಸಿ ಅವರು ಮಾತನಾಡಿದರು.

ದೇಶವನ್ನು ಸಮಗ್ರ ಅಭಿವೃದ್ಧಿಯ ಪಥದಲ್ಲಿ ಮುನ್ನಡೆಸುವಲ್ಲಿ ಈ ಇಬ್ಬರೂ ಮಹಾನ್ ನಾಯಕರು ನೀಡಿದ ಕೊಡುಗೆ ಅನನ್ಯ. ಉಳುವವನೇ ಹೊಲದೊಡೆಯ ಎಂಬ ಕ್ರಾಂತಿಕಾರಿ ಕಾನೂನಿನ ಮೂಲಕ ದೇವರಾಜ ಅರಸು ಅವರು ರಾಜ್ಯದಲ್ಲಿ ಸಾಮಾಜಿಕ ನ್ಯಾಯಕ್ಕೆ ಭದ್ರ ಅಡಿಪಾಯ ಹಾಕಿದರು.

ಹಾಗೆಯೇ, ಇಂದು ನಾವು ಕಾಣುತ್ತಿರುವ ಡಿಜಿಟಲ್ ಭಾರತದ ಪರಿಕಲ್ಪನೆ ಹಾಗೂ ತಾಂತ್ರಿಕ ಪ್ರಗತಿಗೆ ಮುನ್ನುಡಿ ಬರೆದ ಶ್ರೇಯಸ್ಸು ರಾಜೀವ್ ಗಾಂಧಿ ಅವರಿಗೆ ಸಲ್ಲುತ್ತದೆ ಎಂದು ಅವರು ಸ್ಮರಿಸಿದರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಘು ದಾಸರಕೊಪ್ಪಲು, ಹಾಸನ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಂದ್ರಶೇಖರ್, ಮುಖಂಡ ಜೆಸಿಬಿ ಚಂದ್ರಶೇಖರ್, ಆಲೂರು ಓಬಿಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಜಶೇಖರ್, ಹೊಳೆನರಸೀಪುರ ಒಬಿಸಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಚ್.ಎನ್. ಗೌಡ ಮತ್ತಿತರರಿದ್ದರು.

# ಹೊಳೆನರಸೀಪುರ ಕಾಲೇಜಿನಲ್ಲಿ ಸ್ವಾತಂತ್ರ್ಯ ದಿನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: 80ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ರೋಟರಿ ಕ್ಲಬ್ ಆಫ್ ಹಾಸನ ರಾಯಲ್ ವತಿಯಿಂದ ಹೊಳೆನರಸೀಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿವಿಧ ಬಗೆಯ ಹಣ್ಣಿನ ಸಸಿಗಳನ್ನು ನೆಡಲಾಯಿತು.

ಈಚೆಗೆ ನಡೆದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಹೊಳೆನರಸೀಪುರ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ರೋಟರಿ ರಾಯಲ್ ಕ್ಲಬ್ ನ ಕಾರ್ಯದರ್ಶಿ ಡಾ. ಎಚ್. ಎನ್. ಹರೀಶ್ ಅವರು ಕಾಲೇಜಿನ ಪ್ರಾಂಶುಪಾಲ ಜಿ.ಜಿ. ರಾಜಶೇಖರ್ ಸಹಕಾರದೊಂದಿಗೆ ವಿವಿಧ ಬಗೆಯ ಹಣ್ಣಿನ ಸಸಿಗಳನ್ನು ನೆಡುವ ಮೂಲಕ ವಿಶೇಷವಾಗಿ ಸ್ವಾತಂತ್ರ್ಯ ದಿನಾಚರಣೆ ಮಾಡಲಾಯಿತು.




ಇದೇ ವೇಳೆ ದೆಹಲಿಯಲ್ಲಿ ಕಳೆದ ವರ್ಷ ನಡೆದಿದ್ದ ಗಣರಾಜ್ಯೋತ್ಸವದಲ್ಲಿ ಕರ್ನಾಟಕ/ಗೋವಾ ಎನ್.ಸಿ.ಸಿ. ಬೆಟಾಲಿಯನ್‌ನಿಂದ ಆಯ್ಕೆಯಾಗಿ ಪ್ರಧಾನ ಮಂತ್ರಿ ಅವರಿಂದ ಧ್ವಜ ಸ್ವೀಕಾರ ಮಾಡಿದ ಹೊಳೆನರಸೀಪುರ ಕಾಲೇಜಿನ ವಿದ್ಯಾರ್ಥಿ ವೈ.ಪಿ. ಅಭಿಷೇಕ್ ಅವರನ್ನು ರಾಯಲ್ ಕ್ಲಬ್ ವತಿಯಿಂದ ಸನ್ಮಾನಿಸಲಾಯಿತು.

# ಗ್ಯಾಸ್ ಗೀಸರ್ ಅನಿಲ ಸೋರಿಕೆ: ತಾಯಿ-ಮಗು ಸಾವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಗ್ಯಾಸ್ ಗೀಸರ್‌ನಿಂದ ಅನಿಲ ಸೋರಿಕೆಯಾಗಿ ಉಸಿರುಗಟ್ಟಿ ತಾಯಿ ಹಾಗೂ ಎರಡೂವರೆ ವರ್ಷದ ಮಗು ಮೃತಪಟ್ಟಿರುವ ಘಟನೆ ಬೆಂಗಳೂರಿನ ಯಲಹಂಕ ಸಮೀಪದ ಬ್ಯಾಲದಕೆರೆಯಲ್ಲಿ ನಡೆದಿದೆ.

ಸಕಲೇಶಪುರ ತಾಲ್ಲೂಕಿನ ಹಾಲೇಬೇಲೂರು ಗ್ರಾಮದ ತೇಜಸ್ವಿನಿ (33) ಹಾಗೂ ಅವರ ಎರಡೂವರೆ ವರ್ಷದ ಪುತ್ರ ರಿತಿಕ್ ಮೃತರು. ಮೃತರ ಕುಟುಂಬದಲ್ಲಿ ಸೂತಕದ ವಾತಾವರಣ ನಿರ್ಮಾಣವಾಗಿದ್ದು, ಬಂಧುಗಳ ಆಕ್ರಂದನ ಮುಗಿಲು ಮುಟ್ಟಿದೆ.

ಹಾಲೇಬೇಲೂರು ಗ್ರಾಮದ ಮಂಜುನಾಥ್ ಅವರು ಬೆಂಗಳೂರಿನ ಯಲಹಂಕ ಸಮೀಪದ ಬ್ಯಾಲದಕೆರೆಯಲ್ಲಿ ಟೈಲರ್ ವೃತ್ತಿ ಮಾಡಿಕೊಂಡು ಕುಟುಂಬದೊಂದಿಗೆ ವಾಸವಾಗಿದ್ದರು. ಎಂದಿನಂತೆ ಬುಧವಾರ ಮಧ್ಯಾಹ್ನ ಮನೆಗೆ ಊಟಕ್ಕೆ ಬಂದಿದ್ದ ಅವರು, ಊಟ ಮುಗಿಸಿಕೊಂಡು ಮತ್ತೆ ಅಂಗಡಿಗೆ ತೆರಳಿದ್ದರು.

ವರಮಹಾಲಕ್ಷ್ಮಿ ಹಬ್ಬದ ಹಿನ್ನೆಲೆಯಲ್ಲಿ



ಮಂಜುನಾಥ್ ಅವರ ತಂದೆತಾಯಿ ಕೂಡ ಮಗನ ಮನೆಗೆ ಆಗಮಿಸಿ ಹಬ್ಬದ ಸಿದ್ಧತೆಯಲ್ಲಿ ತೊಡಗಿಸಿಕೊಂಡಿದ್ದರು.

**ಅರ್ಧ ಗಂಟೆಯಾದರೂ ಹೊರಬಾರದ ತಾಯಿಮಗು**

ಮಧ್ಯಾಹ್ನ ಸುಮಾರು 3.30ರ ವೇಳೆಗೆ ತೇಜಸ್ವಿನಿ ಅವರು ಪುತ್ರ ರಿತಿಕ್‌ನನ್ನು ಸ್ನಾನ ಮಾಡಿಸಲು ಬಾತ್‌ರೂಮ್‌ಗೆ ಕರೆದೊಯ್ದಿದ್ದರು. ಆದರೆ ಅರ್ಧ ಗಂಟೆಗೂ ಹೆಚ್ಚು ಸಮಯ ಕಳೆದರೂ ತಾಯಿ ಮಗು ಹೊರಗೆ ಬಾರದಿರುವುದು ಮನೆಯಲ್ಲಿದ್ದ ಅತ್ತೆಮಾವನ ಗಮನಕ್ಕೆ ಬಂದಿದೆ.

ಕಳವಳಗೊಂಡ ಅವರು ಬಾತ್‌ರೂಮ್ ಬಾಗಿಲು ತಟ್ಟಿ ಕರೆದರೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ತಕ್ಷಣ ಪಕ್ಕದಲ್ಲಿದ್ದ ಮಂಜುನಾಥ್ ಅವರ ಅಂಗಡಿಗೆ ತೆರಳಿ ವಿಷಯ ತಿಳಿಸಿ ಅವರನ್ನು ಕರೆದುಕೊಂಡು ಬಂದಿದ್ದಾರೆ.

**ಬಾಗಿಲು ಒಡೆದಾಗ ಪ್ರಜ್ಞಾಹೀನ ಸ್ಥಿತಿಯಲ್ಲಿ ಪತ್ತೆ**

ಮಂಜುನಾಥ್ ಅವರು ಮನೆಗೆ ಬಂದು ಬಾತ್ ರೂಮ್ ಬಾಗಿಲು ಒಡೆದು ನೋಡಿದಾಗ ತೇಜಸ್ವಿನಿ ಹಾಗು ರಿತಿಕ್ ಇಬ್ಬರೂ ಪ್ರಜ್ಞಾಹೀನ ಸ್ಥಿತಿಯಲ್ಲಿ ಬಿದ್ದಿರುವುದು ಕಂಡುಬಂದಿದೆ. ಕೂಡಲೇ ಇಬ್ಬರನ್ನೂ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ ಪರೀಕ್ಷಿಸಿದ ವೈದ್ಯರು ತಾಯಿಮಗು ಮೃತಪಟ್ಟಿರುವುದನ್ನು ದೃಢಪಡಿಸಿದ್ದಾರೆ.

ಬಾತ್‌ರೂಮ್‌ನಲ್ಲಿ ಗ್ಯಾಸ್ ಗೀಸರ್‌ನಿಂದ ಅನಿಲ ಸೋರಿಕೆಯಾಗಿ ಉಸಿರುಗಟ್ಟಿರುವ ಸಾಧ್ಯತೆ ಇದೆ ಎಂದು ಶಂಕಿಸಲಾಗಿದ್ದು, ಘಟನೆಯ ನಿಖರ ಕಾರಣ ತನಿಖೆಯ ಬಳಿಕ ತಿಳಿದು ಬರಬೇಕಿದೆ.

ಘಟನೆಯ ಮಾಹಿತಿ ತಿಳಿದ ಶಾಸಕ ಸಿಮೆಂಟ್ ಮಂಜು ಅವರು ಮೃತರ ಕುಟುಂಬವನ್ನು ಸಂಪರ್ಕಿಸಿ ಸಂತಾಪ ಸೂಚಿಸಿದ್ದಾರೆ.

## ತಾಯಿ-ಮಗು ಸಾವು: ಆತ್ಮಹತ್ಯೆ



ಆಲೂರು: ಪಟ್ಟಣದ ಹೌಸಿಂಗ್ ಬೋರ್ಡ್‌ನ ಮನೆಯೊಂದರಲ್ಲಿ ತಾಯಿ-ಮಗು ಮೃತಪಟ್ಟಿದ್ದು, ಮಗುವನ್ನು ಕೊಂದು ತಾಯಿ ಆತ್ಮಹತ್ಯೆಗೆ ಶರಣಾಗಿದ್ದಾರೆಂದು ತಿಳಿದುಬಂದಿದೆ.

ಪಟ್ಟಣದ ಹೌಸಿಂಗ್ ಬೋರ್ಡ್ ನಿವಾಸಿ ಅನು (27) ಹಾಗೂ ಆರ್ಯನ್ (2) ಮೃತರು. ವಿಷ ಹಾಕಿದ್ದ ಊಟವನ್ನು ಮಗುವಿಗೆ ತಿನ್ನಿಸಿದ ತಾಯಿ ಅದೇ ಕೊಠಡಿಯಲ್ಲಿ ನೇಣು ಬಿಗಿದುಕೊಂಡಿದ್ದಾರೆ ಎನ್ನಲಾಗಿದೆ.

ತಾಲ್ಲೂಕಿನ ಸಿಂಗಾಪುರ ಗ್ರಾಮದ ಅನು-ಶ್ರೀನಿವಾಸ್ ಕಳೆದ ಐದು ವರ್ಷದ ಹಿಂದೆ ಪ್ರೇಮ ವಿವಾಹವಾಗಿದ್ದರು. ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡಿದ್ದ ಶ್ರೀನಿವಾಸ್ ಕಳೆದ ಎರಡು ತಿಂಗಳ ಹಿಂದೆ ಪಟ್ಟಣದ ಹೌಸಿಂಗ್ ಬೋರ್ಡ್‌ನಲ್ಲಿ ಬಾಡಿಗೆ ಮನೆ ಮಾಡಿಕೊಂಡು ವಾಸವಿದ್ದರು. ಸಾವಿಗೆ ನಿಖರ ಕಾರಣ ತಿಳಿದುಬಂದಿಲ್ಲ. ಶ್ರೀನಿವಾಸ್ ಹಾಸನದ ಫೈನಾನ್ಸ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. ಸಂಜೆ ಕೆಲಸ ಮುಗಿಸಿ ಮನೆಗೆ ಹೋದಾಗ ವಿಚಾರ ತಿಳಿದಿದೆ. ಪಟ್ಟಣ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು.

## ಮೇಯಲು ಬಿಟ್ಟಿದ್ದ ಜಾನುವಾರು ಕಳವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಜಮೀನಿನ ಬಳಿ ಮೇಯಲು ಬಿಟ್ಟಿದ್ದ ಅಂದಾಜು 65 ಸಾವಿರ ರೂ. ಮೌಲ್ಯದ ಎರಡು ರಾಸುಗಳನ್ನು ಕಳವು ಮಾಡಿರುವ ಘಟನೆ ತಾಲ್ಲೂಕಿನ ಗಾಣದಹೊಳೆಯಲ್ಲಿ ತಡವಾಗಿ ಬೆಳಕಿಗೆ ಬಂದಿದೆ.

ಗ್ರಾಮದ ಉಮೇಶ್ ಎಂಬುವವರಿಗೆ ಸೇರಿದ ಹಸು ಹಾಗು ಹೋರಿ ಕಳುವಾಗಿದೆ. ಜು. 25ರಂದು ಹೆಬ್ಬಸಾಲೆ ಚೆಕ್ ಡ್ಯಾಂ ಸಮೀಪದ ತಮ್ಮ ಜಮೀನಿನಲ್ಲಿ ಮೇಯಲು ಬಿಟ್ಟಿದ್ದ ಜಾನುವಾರುಗಳನ್ನು ಮನೆಗೆ ಕರೆತರಲು ಹೋಗಿದ್ದಾಗ ರಾಸುಗಳು ಇಲ್ಲದಿರುವುದು ಗೊತ್ತಾಗಿದೆ. ಎಷ್ಟೇ ಹುಡುಕಿದರೂ ಅವುಗಳು ಸಿಕ್ಕಿಲ್ಲ.

ಮತ್ತೊಂದು ಪ್ರಕರಣದಲ್ಲಿ ಹೆನ್ನಲಿ ಗ್ರಾಮದ ಶಾಂತರಾಜ್ ಎಂಬುವವರಿಗೆ ಸೇರಿದ 2 ಹಸುಗಳನ್ನು ಕಳವು ಮಾಡಲಾಗಿದೆ. ಆ. 6ರಂದು ಮೇಯಲು ಬಿಟ್ಟಿದ್ದ ಹಸುಗಳು ಏಕಾಏಕಿ ನಾಪತ್ತೆಯಾಗಿವೆ. ಅಂದಾಜು 1.20 ಲ.ರೂ. ಬೆಲೆಯ ಹಸುಗಳು ಕಳುವಾಗಿವೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕೇರಳಕ್ಕೆ ಸಾಗಿಸುತ್ತಿದ್ದ 30 ರಾಸುಗಳ ರಕ್ಷಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಬಿ.ಎಂ. ರಸ್ತೆಯ ವರ್ಲಿಕೊಪ್ಪಲಿನ ಹೇಮಾವತಿ ಫಿಶ್ ಲ್ಯಾಂಡ್ ಬಳಿ ಮಂಗಳವಾರ ರಾತ್ರಿ 30 ರಾಸುಗಳನ್ನು ರಕ್ಷಿಸಲಾಗಿದೆ.

ಕೇರಳದ ಕಸರಗೂಡು ನಿವಾಸಿ ಕುರಿಯನ್ ದೇವಸಿಯ ಎಂಬಾತ ಗೂಡ್ಸ್ ಕಂಟೇನರ್‌ನಲ್ಲಿ ರಾಸುಗಳ ಸಾಗಿಸುತ್ತಿದ್ದ. ಮಂಗಳವಾರ ಹಾಸನದ ಸಂತೆಯಲ್ಲಿ ಖರೀದಿಸಿದ್ದ ರಾಸುಗಳನ್ನು ತಡರಾತ್ರಿ 12ರ ಸಮಯದಲ್ಲಿ ಕೋರವಂಗಲ ಸಮೀಪ ಗೂಡ್ಸ್ ಕಂಟೇನರ್‌ಗೆ ತುಂಬಿಕೊಂಡು ಚನ್ನರಾಯಪಟ್ಟಣ ಮಾರ್ಗವಾಗಿ ಕೇರಳಕ್ಕೆ ಸಾಗಿಸಲಾಗುತ್ತಿತ್ತು ಎನ್ನಲಾಗಿದೆ. ಪಶುವೈದ್ಯಾಧಿಕಾರಿಗಳಿಂದ ರಾಸುಗಳ ಆರೋಗ್ಯ ಪರೀಕ್ಷೆ ನಡೆಸಿ ನಂತರ ಗೋಶಾಲೆಗೆ ಸ್ಥಳಾಂತರಿಸಲಾಯಿತು. ಕಂಟೇನರ್ ಚಾಲಕ ಹಾಗೂ ವಾಹನವನ್ನು ವಶಕ್ಕೆ ಪಡೆಯಲಾಗಿದೆ.

## ಇತಿಹಾಸದಲ್ಲಿ ಈ ದಿನ

### ಆಗಸ್ಟ್-21

1790: ಬ್ರಿಟಿಷ್ ಸೇನೆ ತಮಿಳುನಾಡಿನ ದಿಂಡಿಗಲ್ ಪ್ರದೇಶವನ್ನು ವಶಪಡಿಸಿಕೊಂಡಿತು.

1911: ಲಿಯೊನಾರ್ಡೊ ಡಾ ವಿನ್ಸಿಯ ಪ್ರಸಿದ್ಧ ಮೋನಾಲಿಸಾ ಚಿತ್ರವನ್ನು ಪ್ಯಾರಿಸ್‌ನ ಲೂವ್ರ್ ವಸ್ತುಸಂಗ್ರಹಾಲಯದಿಂದ ಕಳವು ಮಾಡಲಾಯಿತು. ಎರಡು ವರ್ಷಗಳ ಬಳಿಕ ಚಿತ್ರ ಪತ್ತೆಯಾಯಿತು.

1944: ವಿಶ್ವಸಂಸ್ಥೆಯ ಸ್ಥಾಪನೆಗೆ ಪ್ರಮುಖ ಪೂರ್ವಭಾವಿಯಾಗಿದ್ದ ಡಂಬಾರ್ಟನ್ ಓಕ್ಸ್ ಸಭೆ ಆರಂಭವಾಯಿತು.

1959: ಹವಾಯಿ ಅಮೆರಿಕದ 50ನೇ ರಾಜ್ಯವಾಯಿತು.

1986: ಕ್ಯಾಮರೂನ್‌ನ ಲೇಕ್ ನ್ಯೋಸ್‌ನಲ್ಲಿ ವಿಷಕಾರಿ ಕಾರ್ಬನ್ ಡೈಆಕ್ಸೈಡ್ ಅನಿಲ ಸ್ಫೋಟಗೊಂಡು ಸುಮಾರು 1,700ಕ್ಕೂ ಹೆಚ್ಚು ಮಂದಿ ಮೃತಪಟ್ಟರು.

1991: ಸೋವಿಯತ್ ಒಕ್ಕೂಟದಿಂದ ಲಾಟ್ವಿಯಾ ತನ್ನ ಸಂಪೂರ್ಣ ಸ್ವಾತಂತ್ರ್ಯವನ್ನು ಪುನಃ ಘೋಷಿಸಿತು.

1993: ಮಂಗಳ ಗ್ರಹವನ್ನು ಅಧ್ಯಯನ ಮಾಡಲು ಕಳುಹಿಸಲಾಗಿದ್ದ ಮಾರ್ಸ್ ಆಬ್ಸರ್ವರ್ ಬಾಹ್ಯಾಕಾಶ ನೌಕೆಯೊಂದಿಗೆ ನಾಸಾ ಸಂಪರ್ಕ ಕಳೆದುಕೊಂಡಿತು.

**ಜನನ**

1904: ಕೌಂಟ್ ಬೇಸಿ, ಖ್ಯಾತ ಜಾಝ್ ಸಂಗೀತಗಾರ

1936: ವಿಲ್ಟ್ ಚೇಂಬರ್‌ಲೇನ್, ಅಮೆರಿಕದ ಖ್ಯಾತ ಬ್ಯಾಸ್ಕೆಟ್‌ಬಾಲ್ ಆಟಗಾರ

1986: ಉಸೇನ್ ಬೋಲ್ಟ್, ಜಮೈಕಾದ ಖ್ಯಾತ ಓಟಗಾರ ಹಾಗೂ ಒಲಿಂಪಿಕ್ ಚಾಂಪಿಯನ್

1988: ರಾಬರ್ಟ್ ಲೆವಾಂಡೋವ್ಸ್ಕಿ, ಪೋಲೆಂಡ್‌ನ ಖ್ಯಾತ ಫುಟ್ಬಾಲ್ ಆಟಗಾರ

**ನಿಧನ**

1940: ಲಿಯಾನ್ ಟ್ರಾಟ್ಸ್ಕಿ, ರಷ್ಯಾದ ಕ್ರಾಂತಿಕಾರಿ ನಾಯಕ

1979: ಜ್ಯೂಸೆಪ್ಪೆ ಮೆಅಝಾ, ಇಟಲಿಯ ಖ್ಯಾತ ಫುಟ್ಬಾಲ್ ಆಟಗಾರ

1995: ಸುಬ್ರಹ್ಮಣ್ಯನ್ ಚಂದ್ರಶೇಖರ್, ಭಾರತೀಯ ಮೂಲದ ಖ್ಯಾತ ಖಗೋಳ ಭೌತಶಾಸ್ತ್ರಜ್ಞ ಹಾಗೂ ನೊಬೆಲ್ ಪ್ರಶಸ್ತಿ ಪುರಸ್ಕೃತರು

2006: ಖ್ಯಾತ ಶಹನಾಯಿ ವಾದಕ ಉಸ್ತಾದ್ ಬಿಸ್ಮಿಲ್ಲಾ ಖಾನ್

# ಅದೊಂದು ಬೇರೆಯದೇ ಅನುಭೂತಿ...10

**ಧನಂಜಯ ಜೀವಾಳ ಬಿ.ಕೆ.**

ಗ್ರಾಮಾಯಣ-52

ಕೈಯ್ಯಲ್ಲಿ ಹಿಡಿದಿದ್ದ ಪ್ಲೇಟಿನಲ್ಲಿದ್ದ ಮದ್ದೂರೊಡೆ, ಮೊಸರುಬಜ್ಜಿ, ಪಲಾವ್ ಅನ್ನು ತಿನ್ನುವುದನ್ನು ಸಹ ಮರೆತು, ಬಾಯಿಗೆ ಹಾಕಿಕೊಂಡದ್ದನ್ನು ಅಗಿದು ನುಂಗುವುದನ್ನು ಸಹಾ ಅಲ್ಲಿಗೇ ನಿಲ್ಲಿಸಿ, ಅರೆಬರೆ ತಿಂದ ಕೈ ಅವರಿಗರಿವಿಲ್ಲದಂತೆ ಒಣಗಿ ಹೋಗಿದ್ದರೂ ಅದರ ಪರಿವೆಯೇ ಇಲ್ಲದಂತೆ ಕಣ್ಣರಳಿಸಿಕೊಂಡು ಗಿರೀಶ್ಮೇಷ್ಟ್ರು ಹೇಳುತಿದ್ದುದನ್ನೇ ಕೇಳಿಸಿಕೊಳ್ಳುತ್ತಿದ್ದ ಅಡುಗೆ ಕೆಲಸದವರಾದಿಯಾಗಿ ಎಲ್ಲರೂ ಯಾವುದೋ ಒಂದು ಥ್ರಿಲ್ಲರ್ ಸಿನೆಮಾ ನೋಡಿದ ಆನಂದದಿಂದ ಮುದಗೊಂಡಿದ್ದರು. ಇದುವರೆವಿಗೂ ಸಾಧಾರಣ ಹೀರೋ ಆಗಿದ್ದ ಗಿರೀಷ್ಮೇಷ್ಟ್ರು ಈ ಕ್ಷಣದಿಂದ ಅಲ್ಲಿದ್ದವರೆಲ್ಲರ ದೃಷ್ಟಿಯಲ್ಲಿ ಸೂಪರ್ ಡೂಪರ್ ಸ್ಟಾರ್ ಆಗಿಬಿಟ್ಟಿದ್ದರು.

ಬೆಳಿಗ್ಗೆ ಆರು ಗಂಟೆಗೇನೇ ಗಂಟುಮೂಟೆ ಕಟ್ಟಿದ ಪ್ರವಾಸೀ ತಂಡ, ಎಂಟೂವರೆಗೆಲ್ಲ ಮುತ್ತೋಡಿ ಅರಣ್ಯಪ್ರದೇಶವನ್ನು ಪ್ರವೇಶಿಸಿತು. ಮುಗಿಲೆತ್ತರದ ಮರಗಳಿಂದ ಥತ್ ಥತ್ ಎಂದು ಬೀಳುತ್ತಿದ್ದ ಇಬ್ಬನಿಯ ಹನಿಗಳು ಆಗಷ್ಟೇ ಹರಡಿಕೊಳ್ಳುತ್ತಿದ್ದ ತೆಳ್ಳನೆಯ ಬಿಸಿಲಿಗೆ ಹೌದೋ ಅಲ್ಲವೋ ಎಂಬಂತೆ ಹಬೆಯಾಡುತ್ತಾ ಆವಿಯಾಗಲು ಅನುವಾಗುತಿತ್ತು. ಈ ಹಿಂದೆಯೇ ನಿಗದಿಯಾಗಿದ್ದಂತೆ ಅರಣ್ಯ ಇಲಾಖೆಯ ಸಫಾರಿ ಜೀಪುಗಳು ಈ ತಂಡವನ್ನು ಕಾಡಿನ ಕೋರ್ ಏರಿಯಾಕ್ಕೆ ಕರೆದೊಯ್ಯಲು ಸಿದ್ಧವಾಗಿ ನಿಂತಿದ್ದವು. ಅರಣ್ಯ ಇಲಾಖೆಯವರೇ ಬೆಳಗಿನ ಉಪಾಹಾರದ ವ್ಯವಸ್ಥೆ ಮಾಡಿದ್ದರು. ಲಗುಬಗೆಯಿಂದ ಕಾಫಿ, ತಿಂಡಿ ಮುಗಿಸಿಕೊಂಡವರಿಗೆ ನೇರವಾಗಿ ಆನೆ, ಕಾಟಿ, ಜಿಂಕೆ, ಕಡವೆ, ಹುಲಿ, ಕಾಡುನಾಯಿ, ನವಿಲು, ಕೆಂಜಳಿಲು, ಕಾಳಿಂಗಸರ್ಪ ಮುಂತಾದವನ್ನು ನೋಡುವ ಕಾತರ ಹಾಗೂ ಸಡಗರ. ಅಗತ್ಯ ಮಾರ್ಗಸೂಚಿಗಳನ್ನು ನೀಡಿದ ನಂತರ ವಾಹನಗಳು ನಿಧಾನವಾಗಿ ಕಾಡಿನೊಳಕ್ಕೆ ಚಲಿಸಲಾರಂಭಿಸಿದವು.

ಸುಮಾರು ಎರಡು ಗಂಟೆಗಳ ತಿರುಗಾಟದಲ್ಲಿ ಹಲವಾರು ಪ್ರಾಣಿಗಳ, ಅಪೂರ್ವ ತಾಣಗಳ ಎದುರುವಿಕೆಯ ನಂತರ ಸಫಾರಿ ವಾಹನಗಳು ಸಂಚರಿಸಲೆಂದೇ ನಿಗದಿಯಾಗಿದ್ದ ಹಾದಿಯ ಬದಿಯಲ್ಲಿದ್ದ ಪೊದೆಯ ಪಕ್ಕದಲ್ಲಿ ನಿಂತೇ



ವಿಶ್ರಮಿಸುತಿದ್ದ ಆರಡಿಗೂ ಎತ್ತರದ ಭುಜ ಹೊಂದಿದ್ದ ಹಾಗೂ ಕರಿಶಿಲೆಯನ್ನೇ ಕಡೆದಿಟ್ಟಂತಿದ್ದ ಬೃಹತ್ಗಾತ್ರದ ಕಾಡುಕೋಣವೊಂದು ದಾರಿಗಡ್ಡವಾಗಿ ನಿಂತು, ತನ್ನ ತಲೆಯನ್ನು ತಗ್ಗಿಸಿ, ಅಗಲವಾದ ಹೊಳ್ಳೆಯಿಂದ ಬುಸಬುಸನೆ ಬಿಡುತ್ತಿದ್ದ ಉಸಿರಿಗೆ ನೆಲದಲ್ಲಿದ್ದ ಧೂಳು ಚಿಮ್ಮುತ್ತಿತ್ತು. ವಿಶಾಲವಾಗಿ ಎರಡೂ ಬದಿಗೆ ಪ್ರಭಾವಳಿಯಂತೆ ವಿಜೃಂಭಿಸುತ್ತಾ ಥಳಥಳಿಸುತಿದ್ದ ಬಿಳಿತುದಿಯ ಕಪ್ಪು ಕೋಡುಗಳನ್ನು ಎಲ್ಲದಕ್ಕಿಂತ ಮುಂದಿದ್ದ ಸಫಾರಿ ವಾಹನದ ಮುಂದಿನ ಬಂಪರ್‌ಗೆ ಒದೆಕೊಟ್ಟು ತನ್ನ ಪ್ರತಿರೋಧ ತೋರಹತ್ತಿತು. ವಾಹನದೊಳಗಿದ್ದ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಗಾಬರಿ ಗಲಿಬಿಲಿಯಿಂದ ಗದ್ದಲಮಾಡತೊಡಗಿದರು.

ಇಲಾಖೆಯ ನೌಕರನೇ ಆಗಿದ್ದ ವಾಹನ ಚಾಲಕ, ಇಂಜಿನ್ನನ್ನು ಆಫ್ ಮಾಡಿ, ಹಿಂದಕ್ಕೆ ತಿರುಗಿ, ಯಾರೂ ಗದ್ದಲ ಮಾಡಬೇಡಿ, ಇದು ಸ್ವಲ್ಪ ತುಂಟಾಟದ ಕೋಣ, ಸ್ವಲ್ಪ ಹೊತ್ತು ತಂಟೆ ಮಾಡಿ ಅದರ ಪಾಡಿಗೆ ಹೊರಟುಹೋಗುತ್ತೆ, ಅಲ್ಲಿಯವರೆಗೆ ಅದರ ಚಲನವಲನಗಳನ್ನು ನಿಶ್ಯಬ್ಧವಾಗಿ ಗಮನಿಸುತ್ತಿರಿ. ಇಂಥಾ ಸಂದರ್ಭಗಳು ಎಲ್ಲರಿಗೂ ಸಿಗೋದಿಲ್ಲ ಎಂದು, ತಾನೂ ಡ್ಯಾಷ್ಬೋರ್ಡಿನ ಮುಂದಕ್ಕೆ ಬಾಗಿ ಆಸಕ್ತಿಯಿಂದ ಗಮನಿಸತೊಡಗಿದ. ಬಂಪರಿಗೆ ಹಣೆಯನ್ನು ಕೊಟ್ಟು, ವಾಹನವನ್ನು ಕೊಂಚ ಹಿಂದಕ್ಕೆ ತಳ್ಳಿದ ಕೋಣ, ಎರಡ್ಹೆಜ್ಜೆ ಹಿಂದಕ್ಕೆ ಸರಿದು ತನ್ನ ತಲೆಯನ್ನು ಮೂರ್ನಾಲ್ಕು ಬಾರಿ ಅರ್ಧ ಚಂದ್ರಾಕಾರವಾಗಿ ಆಡಿಸಿ, ವಾಹನದೊಳಗಿದ್ದವರೆಡೆಗೆ ಅರ್ಥಗರ್ಭಿತವಾಗಿ ನೋಡಿ ನಿಧಾನವಾಗಿ ಮರಗಳತ್ತ ಸರಿದು ಪೊದೆಗಳ ಸಂದಿಯಲ್ಲಿ ಮರೆಯಾಯಿತು. ಏನು ಹೇಳಲಿಕ್ಕಿತ್ತೋ, ಏನ ಹೇಳಿತೋ, ಕಾಡಿನ ಗುಟ್ಟನ್ನು ಬಲ್ಲವರಾರೋ?

ಬದುಕಿನ ಅವಿಸ್ಮರಣೀಯ ಕ್ಷಣಗಳಿಗೆ ಸಾಕ್ಷಿಯಾದ ಆ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಆ ಗುಂಗಿನಿಂದ ಹೊರಬರಲು ಬಹಳ ಹೊತ್ತು ತೆಗೆದುಕೊಂಡರು. ಕಾಡು ಹಾಗೂ ಪೊದೆಗಳ ಪ್ರದೇಶದಿಂದ ಕೊಂಚ ಹೊರಸರಿದ ನಂತರ ಸಫಾರಿ ವಾಹನ ಹುಲ್ಲುಗಾವಲಿನಂಥಾ ಬಯಲನ್ನು ಪ್ರವೇಶಿಸಿತು.

ವಾಹನ ಚಾಲಕ ವಾಹನವನ್ನು ಇದ್ದಕ್ಕಿದ್ದಂತೆ ಅನಿರೀಕ್ಷಿತವಾಗಿ ನಿಲ್ಲಿಸಿದ. ಹಿಂದಕ್ಕೆ ತಿರುಗದೇ ತನ್ನ ಎಡಗೈಯ್ಯ ಹಸ್ತವನ್ನಗಲಿಸಿ ಎಲ್ಲರೂ ಸದ್ದು ಮಾಡದೇ ಹಾದಿಯ ಎಡಪಕ್ಕದ ಬಯಲಿನೆಡೆಗೆ ಗಮನ ಹರಿಸುವಂತೆ ಸಂಜ್ಞೆ ಮಾಡಿದ.

ಮೂರ್ನಾಲ್ಕು ಅಡಿ ಎತ್ತರಕ್ಕೆ ಬೆಳೆದಿದ್ದ ಹುಲ್ಲಿನ ರಾಶಿಯ ನಡುವೆ ಅಗಾಧ ಗಾತ್ರದ ಹುಲಿಯೊಂದು ಮಧ್ಯಾಹ್ನದ ಭೋಜನದ ನಂತರದ ವಿಶ್ರಾಂತಿ ಪಡೆಯುವಂತೆ ಅದೆತ್ತಲೋ ನೋಡುತ್ತಾ ವಿಶ್ರಮಿಸುತಿತ್ತು. ಅದರ ಮಾರುದ್ದದ ಬಾಲ ಸುತ್ತಲಿನ ಹುಲ್ಲಿಗೆ ಪೈಪೋಟಿ ಎಂಬಂತೆ ನೆಟ್ಟಗೆ ನಿಗುರಿಕೊಂಡು ತುದಿಯ ಗೇಣುದ್ದದಷ್ಟು ವಿಶಿಷ್ಠವಾದ ಲಹರಿಯಲ್ಲಿ ತೊನೆಯುತಿತ್ತು. ವಾಹನದಲ್ಲಿ ಎತ್ತರದ ಜಾಗದಲ್ಲಿ ಕುಳಿತಿದುದ್ದರಿಂದ ಇವರಿಗೆ ಹುಲಿಯ ದೇಹ ಕಾಣಿಸುತಿತ್ತೇ ಹೊರತು, ನೆಲದಲ್ಲಿ ನಿಂತಿದ್ದರೆ ತೊನೆಯುತಿದ್ದ ಆ ಬಾಲದ ತುದಿ ಮಾತ್ರ ಗೋಚರಿಸುತಿತ್ತು.

ಫಳಫಳನೆ ಕಂಗೊಳಿಸುತಿದ್ದ ಆ ಹಳದಿ ದೇಹದ ಮೇಲೆ ದೇವರೇ ಪಡಿಯಚ್ಚು ಹಾಕಿದಂತೆ ಕಲಾತ್ಮಕವಾಗಿ ಒಡಮೂಡಿದ್ದ ಆ ಕಪ್ಪು ಪಟ್ಟಿಗಳು ಜಗತ್ತಿನೆಲ್ಲಾ ಸೌಂದರ್ಯವನ್ನು ಎರಕ ಹೋಯ್ದಿಟ್ಟಂತೆ ಕಾಣುತಿತ್ತು. ಏನೋ ಅಸಹಜವಾದದ್ದನ್ನು ಗ್ರಹಿಸಿದಂತೆ ಜಾಗೃತಗೊಂಡ ಆ ಹುಲಿರಾಯ ತನ್ನ ಕತ್ತನ್ನೊಮ್ಮೆ ಹೊರಳಿಸಿ ಮುಖವನ್ನು ಬೆನ್ನ ಹಿಂದಕ್ಕೆ ತಿರುಗಿಸಿ ಸಫಾರಿ ವಾಹನದೆಡೆಗೆ ನೋಡಿತು. ಇಡೀ ಕಾಡಿಗೆ ಕಾಡೇ ಜ್ಯೋತಿಯಾಗಿ ಉರಿದಂತೆ ಆ ಸಫಾರಿ ವಾಹನದೊಳಗಿದ್ದ ಪ್ರತೀಯೋರ್ವರಿಗೂ ತಮ್ಮೊಳಗೆ ನಾನೂರಾನಲವತ್ತು ವೋಲ್ಟ್ ವಿದ್ಯುತ್ ಝಗ್ ಎಂದು ಪ್ರವಹಿಸಿದಂತಾಯಿತು. ಅಕ್ಕಿ ಕೇರುವ ದೊಡ್ಡ ಗಾತ್ರದ ಮೊರದಷ್ಟಗಲವಿದ್ದ ಆ ಮೊಗವನ್ನು ಕಂಡ ಆ ಕ್ಷಣ ಎಲ್ಲರ ಮನದಲ್ಲಿ ಸಾಕ್ಷಾತ್ ದೇವರನ್ನು ಕಂಡ ಅನುಭೂತಿಯನ್ನು ಮೂಡಿಸಿತು.

ಅಗ್ನಿದೇವನೇ ಘನೀಕರಿಸಿ ಹುಲಿಯ ರೂಪದಲ್ಲಿ ದೇದೀಪ್ಯಮಾನನಾಗಿ ಅವತರಿಸಿದ್ದಾನೇನೋ ಎಂಬಂತೆ ಎಲ್ಲರೂ ಧನ್ಯತೆಯ ಅನನ್ಯಭಾವದಲ್ಲಿ ಪರವಶರಾದರು. ಇಡೀ ಪ್ರಾಣಿ ಪ್ರಪಂಚದಲ್ಲಿ ಹುಲಿಗೆ ಯಾಕೆ ವಿಶಿಷ್ಟವಾದ ಹಾಗೂ ಅಪೂರ್ವವಾದ ಸ್ಥಾನವಿದೆ ಎಂದು ಅವರಿಗೆ ಆ ಕ್ಷಣ ವೇದ್ಯವಾಯಿತು.

ನಿಗಿನಿಗಿ ಎನ್ನುತಿದ್ದ ಆ ಕೆಂಡದಂಥಾ ಕಣ್ಣುಗಳು, ಜಗತ್ತಿನೆಲ್ಲಾ ಶೌರ್ಯವನ್ನು ಪ್ರತಿನಿಧಿಸುತ್ತಿದೆಯೇನೋ ಎಂಬಂಥಾ ಆ ಮೀಸೆಗಳು, ಇಡೀ ಅಡವಿಯ ಗಾಂಭೀರ್ಯವೇ ಹರಳುಗಟ್ಟಿದೆಯೇನೋ ಎನ್ನುವಂಥಾ ಮುಖಮುದ್ರೆ, ಆ ದೇವರೇ ಕೆತ್ತಿ, ಕಟೆದು, ಕೊರೆದು, ತಿಕ್ಕಿ ನಿರ್ಮಿಸಿದಂಥಾ ಅಮೋಘ ಅಂಗಸೌಷ್ಟವದ ಹುಲಿರಾಯ ಕೊಂಚ ಹೊತ್ತು ಇವರೆಡೆಗೆ ದೃಷ್ಟಿಸಿ, ತನ್ನ ಬಲಿಷ್ಠ ದೇಹವನ್ನೊಮ್ಮೆ ಗತ್ತಿನಿಂದ ಸೆಟೆಸಿ, ಮೈಮುರಿದು, ವರ್ಣಸಲಸದಳವಾದ ಘನತೆಯ ನಿಲುವಿನೊಂದಿಗೆ ಆ ವಿಸ್ತಾರವಾದ ಹುಲ್ಲುಗಾವಲಿನಲಿ ಮರೆಯಾಯಿತು.

ಬದುಕಿನಲ್ಲೆಂದೆಂದೂ ಮರೆಯಲಾಗದ ಅವರ್ಣನೀಯ ಅನುಭವ ಪಡೆದ ಶಾಲಾಮಕ್ಕಳು, ಈ ಪ್ರವಾಸ ಎಂದೆಂದಿಗೂ ಕೊನೆಯಾಗದೇ ಹೀಗೇ ಮುಂದುವರೆಯುತ್ತಿರಲಿ ಎಂದು ಆ ದೇವರನ್ನು ಬೇಡುತಿದ್ದರು. (ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248